ಬಿಸಿಲನಾಡು ಬಳ್ಳಾರಿ ಜಿಲ್ಲೆಯ ಜೋಳದ ಕೂಡ್ಲಿಗಿಯ ಅರುಣ್ ಜಾನಪದ ಮತ್ತು ಕನ್ನಡ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವೀಧರರು. 'ನೆರಳು ಮಾತನಾಡುವ ಹೊತ್ತು', 'ಸಂಡೂರು ಭೂಹೋರಾಟ', 'ಅವ್ವನ ಅಂಗನವಾಡಿ', 'ಕನ್ನಡ ಜಾನಪದ ತಾತ್ವಿಕ ನೆಲೆಗಳು', 'ಜಾನಪದ ಮುಖಾಮುಖಿ', 'ಜಾನಪದ ವರ್ತಮಾನ', 'ಕನಸೊಡೆದೆದ್ದೆ', 'ಗಂಟಿಚೋರ್ ಸಮುದಾಯ' ಅವರ ಪ್ರಕಟಿತ ಕೃತಿಗಳು. 'ನಡುವೆ ಸುಳಿವ ಹೆಣ್ಣು'– ಮಂಜಮ್ಮ ಜೋಗತಿ ಆತ್ಮಕಥನವನ್ನು ನಿರೂಪಿಸಿದ್ದಾರೆ.

ಅನುಮಾನದಿಂದ ನೋಡುವ, ಎಲ್ಲರ ಬೂಸೀತನವನ್ನು ಬಯಲುಮಾಡುವ ಹುಡುಗ. ಎಲ್ಲರೊಳಗೂ ಬಾಲ್ಯದಲ್ಲಿ ಕ್ಯಾತ ಎಷ್ಟೋ ಸಲ ಬಂದು ಹೋಗಿದ್ದಾನೆ ಅನ್ನಿಸಿಬಿಡುತ್ತದೆ. ಅವನ ಎರಡು ಬಗೆಯ ವ್ಯಕ್ತಿತ್ವಗಳು ಕಾಣಿಸಿಕೊಳ್ಳುತ್ತವೆ. ಗುಡಿಸಲ ಒಳಗೆ ತನ್ನ ಅಕ್ಕ ದೇವೀರಿ ಜತೆ ಇರುವ ಕ್ಯಾತ, ಅಂತೆಯೇ ತಾನು ವಾಸವಾಗಿರುವ ಐವತ್ತು ಗುಡಿಸಲುಗಳ ಇತರ ಮನೆಗಳವರ ಜತೆಗಿನ ಒಡನಾಟದಲ್ಲಿರುವ ಕ್ಯಾತ –ಭಿನ್ನ ವ್ಯಕ್ತಿತ್ವಗಳು.

ಗುಡಿಸಲ ಒಳಗೆ ಒಬ್ಬ ಗಂಡಸಾಗಿ ಅಕ್ಕ ದೇವೀರಿಯ ನಡೆಗಳ ಬಗೆಗೆ ಸಿಟ್ಟಾಗುತ್ತ ಗಂಡು ಪ್ರಧಾನ ಸಮಾಜದ ಸಂಕೇತದಂತೆ ಕಂಡರೆ, ಹೊರಗೆ ಬಂದಾಗ, ವ್ಯವಸ್ಥೆಯ ಕ್ರೌರ್ಯವನ್ನು ಮೆಟ್ಟನಿಲ್ಲಲಾರದ ಮುಗ್ಧ ಹುಡುಗನಂತೆಯೂ ಕಾಣುತ್ತಾನೆ. ಅದೇ ಮುಗ್ಧತೆಯಿಂದ ಸಮಾಜದ ಎಲ್ಲ ಬಗೆಯ ಹಿಪಾಕ್ರಸಿಯನ್ನು ಬಯಲು ಮಾಡುವ ಒಬ್ಬ ಟೀಕಾಕಾರನೂ ಹೌದು. ಸಿನಿಮಾ ಕನಸಿನ ಬಣ್ಣದ ಲೋಕದ ಬೆನ್ನೇರಿ ಹೊರಟ ಪದ್ದಿಯ ಕನಸಿನ ಲೋಕ ಮತ್ತು ಕಟು ವಾಸ್ತವವನ್ನು ಕ್ಯಾತ ಕಡು ಕೋಪದಿಂದಲೂ ಅಸಹಾಯಕತೆಯಿಂದಲೂ ದಾಖಲಿಸುತ್ತಾನೆ.

ಕನ್ನಡ ಚಳವಳಿಯ ಹುಸಿತನವನ್ನೂ ಬಯಲು ಮಾಡಲು ಕ್ಯಾತನಿಗೇನೂ ಕ್ಯಾತೆಯಿಲ್ಲ. ಒಮ್ಮೆ ಕನ್ನಡ ರಾಜ್ಯೋತ್ಸವಕ್ಕೆ ಹಣ ಎತ್ತುವ ಗುಂಪಿನ ಜತೆ ಸೇರುತ್ತಾನೆ. ದೇವೀರಿ ಖರ್ಚಿಗೆಂದು ಸಲೀಸಾಗಿ ಕೊಟ್ಟ ಐವತ್ತು ರೂಪಾಯಿ ಅವಳು ದುಡಿದು ಗಳಿಸಿದ್ದೋ ಅಥವಾ ಅವಳಿಗಾಗಿ ಯಾರೋ ಗಂಡಸರು ಕೊಟ್ಟದ್ದೋ ಎಂದು ಯೋಚಿಸುವಾಗ್ಲೆ ಆ ಹಣವನ್ನು ಖರ್ಚು ಮಾಡುವ ಮನಸ್ಸು ಬಾರದೆ, ರಾಜ್ಯೋತ್ಸವದ ಹುಂಡಿಗೆ ಹಾಕಿಬಿಡುತ್ತಾನೆ. ಇದ್ದಕ್ಕಿದ್ದಂತೆ ಕ್ಯಾತ ಕನ್ನಡದ ಖ್ಯಾತ ಹೋರಾಟಗಾರನಾಗಿಬಿಡ್ತಾನೆ. ಬಳ್ಳಾರಿ ಮೂಲದ ಕ್ಯಾತನನ್ನು ಚಳವಳಿಗಾರರು, 'ಕೊಂಗರ (ತಮಿಳರ) ಹುಡುಗನೇ ಐವತ್ತು ರೂಪಾಯಿ ಕೊಟ್ಟಿರುವಾಗ ನಿಮಗೇನಾಗಿದೆ' ಎಂದು ಉಲ್ಲೇಖಿಸಿ, ಅಂಗಡಿಗಳವರ ಬಳಿ ದುಡ್ಡು ಕೇಳತೊಡಗುತ್ತಾರೆ. ಕೊನೆಗೆ ಈ ಕ್ಯಾತನೇ ಹರಾಜಿಗೊಳಗಾಗುತ್ತಾನೆ.

ತನ್ನ ಅಕ್ಕ ದೇವೀರಿ ಮತ್ತು ಪದ್ದಿಯ ಬಗ್ಗೆ ಹೇಳುತ್ತಾ ದಿಕ್ಕು ದೆಸೆ ಇಲ್ಲದ ಸ್ಲಂನ ಅನಾಥ ಹೆಣ್ಣುಗಳನ್ನು ಗಂಡು ಲೋಕ ಹೇಗೆ ನೋಡುತ್ತದೆ ಎನ್ನುವ ಚಿತ್ರವನ್ನು ಕೊಡುತ್ತಾನೆ. ಸಜ್ಜನ ರಾಜಕಾರಣಿಯ ಬಿಕ್ಕಟ್ಟನ್ನು ಮುಂದಿಡುವ ಎಂಎಲ್‌ಎ ರಾಮಣ್ಣನ ಕಥೆ ಸ್ಲಂ ಲೋಕದ ಒರಟುತನವನ್ನು ಬಿಡಿಸಿ ತೋರಿಸುತ್ತದೆ. ಕೊಳಚೆ ಪ್ರದೇಶದ ಘಾಟು ಮೂಗಿಗೆ ಅಡರುತ್ತದೆ. ಕ್ಯಾತ ಒಮ್ಮೆ ಅನಾಥ ಹುಡುಗನಾಗಿ, ನಿಷ್ಠುರಿಯಾಗಿ, ಲೋಕದ ಡೊಂಕ ತಿದ್ದುವವನಾಗಿ, ಒಮ್ಮೊಮ್ಮೆ ಮನುಷ್ಯನ ಕ್ಷುಲ್ಲಕ ಗುಣಗಳೆಲ್ಲಾ ತುಂಬಿಕೊಂಡವನಾಗಿ ತೋರುತ್ತ, ಕೊಳಕನ್ನು ಪ್ರಶ್ನಿಸುವ ಸಾಕ್ಷಿ ಪ್ರಜ್ಞೆಯಾಗಿ ಬೆಳೆದುನಿಂತಂತೆಯೂ ನನಗೆ ಆಗಾಗ ಭಾಸವಾಗುತ್ತದೆ.

ಲಂಕೇಶರು ಇದನ್ನೊಂದು ರಾಜಕೀಯ ಕಾದಂಬರಿ ಎನ್ನುತ್ತಾ 'ದಾರಿಹೋಕ ನೋಡುವ, ಚಿಂತಿಸುವ, ಸ್ವವಿಮರ್ಶೆ ಮಾಡಿಕೊಳ್ಳುವ ತರಹದವನಾಗಿದ್ದರೆ ಒಂದಲ್ಲ ಒಂದು ದಿನ ಈ ಕ್ಯಾತ ಅಥವಾ ಕೃಷ್ಣ ಸಿಕ್ಕೇ ಸಿಗುತ್ತಾನೆ' ಎನ್ನುತ್ತಾರೆ. ಕ್ಯಾತನ ಮಾತುಗಳು ಅನಾಥ ಪ್ರಜ್ಞೆಯನ್ನು ಮೂಡಿಸುತ್ತವೆ. ಒಮ್ಮೊಮ್ಮೆ ಗಂಟಲು ಕಟ್ಟಿಸುತ್ತದೆ. ಎಷ್ಟೋ ಬಾರಿ ನಮ್ಮ ಕಣ್ಣಂಚಲ್ಲಿ ನೀರು ತುಂಬುತ್ತದೆ. ಹಸಿವಿನ ಕ್ರೂರತೆಯು ನಮ್ಮ ಒಡಲನ್ನು ಚುಚ್ಚುವಂತೆ ಅವನು ಪ್ರಶ್ನಿಸುತ್ತಾನೆ. ನನಗೆ ಗೆಳೆಯನಾಗಿ, ಕಟು ವಿಮರ್ಶಕನಾಗಿ, ಟೀಕಾಕಾರನಾಗಿ ಕಾಣುತ್ತಾನೆ. ಸುಳ್ಳು ವಂಚನೆ ಆತ್ಮರತಿಯ ಸಂದರ್ಭಗಳಲ್ಲೆಲ್ಲಾ 'ಅದೇನು ಡೌಲು ಮಾಡ್ತೀಯೋ' ಎಂದು ನನ್ನನ್ನು ಗದರಿದಂತಾಗುತ್ತದೆ. ●